ಓ.ಎಸ್. ನಂ. 72/2014

ಡಿ.ಡಬ್ಲ್ಯೂ: 01 (ಎನ್ ಕೆ ರುದ್ರಮುನಿ)

ದಿನಾಂಕ: 12.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ – ಶ್ರೀ ಜೆ ಕೆ ಆರ್ ವಕೀಲರಿಂದ.

ನಾನು ಹುಟ್ಟಿ ಬೆಳೆದಿರುವುದೆಲ್ಲ ಹೊಸಳ್ಳಿಯಲ್ಲಿ. ವಾದಿ ಸಹ ಹೊಸಳ್ಳಿ ನಿವಾಸಿ, ವಾದಿಯ ಪರಿಚಯ ಸ್ವಲ್ಪ ಇದೆ. 2 ನೇ ಪ್ರತಿವಾದಿಯ ತಂದೆ ಮತ್ತು ವಾದಿಯ ತಂದೆ ಅಣ್ಣತಮ್ಮಂದಿರು, ಅವರ ಜೀವಂತ ಕಾಲದಲ್ಲಿ ಅವರು ಪಾಲು ವಿಭಾಗ ಆಗಿದ್ದರು ಎಂದರೆ ಹೌದು. ವಾದಿಯ ಹಾಕಿರುವ ದಾವೆಯ ಬಗ್ಗೆ ವಕೀಲರನ್ನು ಕೇಳಿ ತಿಳಿದುಕೊಂಡಿರುತ್ತೇನೆ. ದಾವಾ ಸ್ವತ್ತು ವಾದಿಯ ಕುಟುಂಬದ ಆಸ್ತಿ ಎಂದರೆ ಇರಬಹುದು. ವಾದಿ ಹಾಗೂ ಆತನ ಒಡಹುಟ್ಟಿದವರ ಮಧ್ಯ ದಾವಾ ಸ್ವತ್ತು ಹಾಗೂ ಇತರ ಸ್ವತ್ತುಗಳ ಬಗ್ಗೆ 1981 ರಲ್ಲಿ ಆದ ಪಾಲು ವಿಭಾಗದ ಬಗ್ಗೆ ನನಗೆ ಗೊತ್ತು ಎಂದರೆ ಹೌದು. ದಾವಾ ಸ್ವತ್ತು ಸದರಿ ಪಾಲು ವಿಭಾಗದಲ್ಲಿ ವಾದಿಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸುಳ್ಳು. ದಾವಾ ಸ್ವತ್ತು ಯಾರ ಭಾಗಕ್ಕೆ ಬಂದಿತ್ತು ಎಂದರೆ ನನಗೆ ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು ಅದು ನಾಮಕಾವಸ್ತೇ ಪಾಲು ವಿಭಾಗ ಆಗಿರುತ್ತದೆ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಾಲು ವಿಭಾಗದ ನಂತರ ದಾವಾ ಸ್ವತ್ತು ವಾದಿಯ ಸ್ವಾಧೀನದಲ್ಲಿದೆ ಎಂದರೆ ಸುಳ್ಳು.

ನಾನು ದಾವಾ ಸ್ವತ್ತನ್ನು ಪ್ರತಿವಾದಿ 2 ರವರಿಂದ 2001 ರಲ್ಲಿ ಖರೀದಿ ಮಾಡಿರುತ್ತೇನೆ. ಅದನ್ನು ನಾನು 59,000/- ಕ್ಕೆ ಖರೀದಿ ಮಾಡಿರುತ್ತೇನೆ. ಈ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಹಣ ನೀಡದೇ ದಾವಾ ಸ್ವತ್ತನ್ನು ಖರೀದಿ ಮಾಡದೇ ಇರುವ ಕಾರಣ ಕ್ರಯದ ಮೊತ್ತವನ್ನು ಪ್ರಮಾಣ ಪತ್ರದಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಕ್ರಯ ಪತ್ರವನ್ನೇ ಹಾಜರುಪಡಿಸಿರುತ್ತೇನೆ. ನಾನು ಹಾಗೂ 2 ನೇ ಪ್ರತಿವಾದಿ ಸೇರಿ ವಾದಿಯ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ಕ್ರಯ ಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ದಿ: 18.04.1989 ರಲ್ಲಿ ಆದ ಪಾಲ ವಿಭಾಗದ ಪ್ರಕಾರ 2 ನೇ ಪ್ರತಿವಾದಿಗೆ ದಾವಾ ಆಸ್ತಿ ಬಂದಿರುತ್ತದೆ. ಸದರಿ ಪಾಲು ವಿಭಾಗ ಪತ್ರವನ್ನು ನಾನು ನೋಡಿರುತ್ತೇನೆ. ಅದು ನೊಂದಣಿ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಖರೀದಿ ಮಾಡಿದ ಸಮಯದಲ್ಲಿ ನಾನು ಪಹಣಿ ಪತ್ರ, ಋಣಭಾರ ಪತ್ರ ನೋಡಿ ಖರೀದಿ ಮಾಡಿರುತ್ತೇನೆ. ಎಷ್ಟನೇ ಇಸವಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ನೋಡಿರುತ್ತೇನೆ ಎಂದು ನನಗೆ ಹೇಳಲಾಗುವುದಿಲ್ಲ.

ದಾವಾ ಆಸ್ತಿಯಲ್ಲಿ 2 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದ ಬಗ್ಗೆ ನೋಡಿ ಖರೀದಿ ಮಾಡಿರುತ್ತೇನೆ. ನಾನು ಖರೀದಿ ಮಾಡಿದ್ದೇನೆ ಎಂದು ಹೇಳಿದ ಸಮಯದಲ್ಲಿ 2 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲೇ ಇರಲಿಲ್ಲ

ಓ.ಎಸ್. ನಂ. 72/2014

ಡಿ.ಡಬ್ಲ್ಯು: 01 (ಎನ್ ಕೆ ರುದ್ರಮುನಿ)

ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಸಿಯನ್ನು ನಾನು ಹಾಜರುಪಡಿಸಿರುತ್ತೇನೆ. ಅದರಲ್ಲಿ 2 ನೇ ಪ್ರತಿವಾದಿಯ ಹೆಸರು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಇತ್ತು. ನಾನು ಇಸಿಯನ್ನು ಸಲ್ಲಿಸಿರುವುದಿಲ್ಲ ಹಾಗೂ ಇಸಿಯಲ್ಲಿ 2 ನೇ ಪ್ರತಿವಾದಿಯ ಹೆಸರು ಇಲ್ಲ ಎಂದರೆ ಸುಳ್ಳು. 2 ನೇ ಪ್ರತಿವಾದಿ 1981 ರ ಪಾಲು ವಿಭಾಗ ಪತ್ರ ನಾಮಕಾವಸ್ತೇ ಪಾಲು ವಿಭಾಗ ಪತ್ರ ಎಂದು ಹೇಳಿರುತ್ತಾರೆ. ಅವರು ಹೇಳಿರುವ ಆಧಾರದ ಮೇರೆಗೆ ನಾನು ಹೇಳುತ್ತಿದ್ದೇನೆ ಎಂದರೆ ಸುಳ್ಳು. ಆ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ 1989 ರಲ್ಲಿ ಆಗಿರುವುದು ನಿಜವಾದ ಪಾಲು ವಿಭಾಗ ಎಂದು ನನಗೆ ಗೊತ್ತು. 1989 ರ ಪಾಲು ವಿಭಾಗದಲ್ಲಿ ಯಾರ ಹೆಸರಿಗೆ ಯಾವ ಆಸ್ತಿ ಬಂದಿದೆ ಎಂದು ನನಗೆ ಹೇಳಲಾಗುವುದಿಲ್ಲ, ಆದರೆ ದಾವಾ ಸ್ವತ್ತು ಮಾತ್ರ 2 ನೇ ಪ್ರತಿವಾದಿಗೆ ಬಂದಿದೆ. 2 ನೇ ಪ್ರತಿವಾದಿಗೆ ನಾನು ಹೇಳಿರುವಂತೆ ದಾವಾ ಆಸ್ತಿ ಪಾಲು ವಿಭಾಗದಲ್ಲಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

ಮೂಲತಃ ದಾವಾ ಆಸ್ತಿ ವಾದಿಯ ಆಸ್ತಿ ಎಂದರೆ ಸುಳ್ಳು. ದಾವಾ ಆಸ್ತಿಯ ಪಹಣಿ ಪತ್ರಿಕೆಗಳು ವಾದಿಯ ಹೆಸರಿನಲ್ಲಿ ಇತ್ತು ಎಂದರೆ ನಾನು ನೋಡಿದಾಗ ಅದು 2 ನೇ ಪ್ರತಿವಾದಿಯ ಹೆಸರಿನಲ್ಲಿತ್ತು. ಸಾಕ್ಷಿ ಮುಂದುವರೆದು ವಾದಿಯ ಹೆಸರಿನಲ್ಲಿರುವ ಪಹಣಿ ಪತ್ರಿಕೆಗಳನ್ನು ನಾನು ನೋಡಿರುವುದಿಲ್ಲ. ಸಂಪೂರ್ಣ ದಾಖಲಾತಿಗಳನ್ನು ನಾನು ನೋಡಿ ದಾವಾ ಆಸ್ತಿಯನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ವಾದಿಗಳ ಆಸ್ತಿ, ನಾನು ಖರೀದಿ ಪತ್ರದ ಆಧಾರದ ಮೇಲೆ ಅವರ ಸ್ವಾಧೀನಕ್ಕೆ ಧಕ್ಕೆ ಮಾಡುತ್ತಿದ್ದೇನೆ ಎಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲದಿದ್ದರು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.